ದಿನಾಂಕ 31-01-2009ನೇ ಶನಿವಾರ ಅಪರಾಹ್ನ 3-00 ಗಂಟೆಗೆ ಸರಿಯಾಗಿ ಉಳ್ಳಾಲ ಪುರಸಭೆಯ ಕಚೇರಿಯ ಸಭಾಂಗಣದಲ್ಲಿ ಪುರಸಭಾ ಅಧ್ಯಕ್ಷರಾದ ಶ್ರೀ ಯು.ಎ ಇಸ್ಮಾಯಿಲ್ ಇವರ ಅಧ್ಯಕ್ಷತೆಯಲ್ಲಿ ಜರಗಿದ ಸಾಮಾನ್ಯ ಸಭೆಯ ನಡವಳಿಗಳು

ಹಾಜರಿ: ಅಧ್ಯಕ್ಷರು ಮತ್ತು ಸದಸ್ಯರು

--------

ಸಭೆಯ ಪ್ರಾರಂಭದಲ್ಲಿ ಇತೀಚೆಗೆ ನಿಧನರಾದ ಮಾಜಿ ರಾಷ್ಟ್ರಪತಿ ವೆಂಕಟರಾಮನ್ ಇವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು

ವಿಷಯ: 433: ಹಿಂದಿನ ಸಾಮಾನ್ಯ ಸಭೆಯ ನಡವಳಿ (30-12-2008) ಮತ್ತು ಸ್ಥಾಯಿಸಮಿತಿ ಸಭೆಯ ನಡವಳಿ(19-01-2009)ಗಳನ್ನು ಪರಿಶೀಲಿಸಿ ಮಂಜೂರು ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಪರಿಶೀಲಿಸಿ ಮಂಜೂರು ಮಾಡಲಾಯಿತು.

ವಿಷಯ: 434: ಅಕ್ಟೋಬರ್ 2008 ತಿಂಗಳ ಜಮಾಖರ್ಚು ಪರಿಶೀಲಿಸಿ ಮಂಜೂರು ಮಾಡುವ ಬಗ್ಗೆ.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಪರಿಶೀಲಿಸಿ ಮಂಜೂರು ಮಾಡಲಾಯಿತು.

ವಿಷಯ: 435: 2008-09ನೇ ಸಾಲಿನ ಎಸ್.ಎಫ್.ಸಿಯ ಶೇ18ರ ಕ್ರಿಯಾಯೋಜನೆಯಲ್ಲಿ ಶೈಕ್ಷಣಿಕ ಅಭಿವೃದ್ಧಿಗಾಗಿ ದಿನಾಂಕ 01-09-2008ರ ಸಾಮಾನ್ಯ ಸಭೆಯ ನಿರ್ಣಯ ಸಂಖ್ಯೆ 280ಬಿಯಲ್ಲಿ ನಿರ್ಣಯಿಸಿದ ಕ್ರ.ಸಂ 5 ಮತ್ತು 9ರ ಕ್ರಿಯಾಯೋಜನೆಯನ್ನು ಬದಲಾಯಿಸಿ ಉಳ್ಳಾಲ ಪುರಸಬಾ ವ್ಯಾಪ್ತಿಯಡಿ ಪ.ಜಾತಿ/ಪ.ಪಂಗಡದಡಿ ಉನ್ನತ ಶಿಕ್ಷಣವನ್ನು ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರತಿ ಮನೆಗೊಂದರಂತೆ ಕಂಪ್ಯೂಟರ್ ಒದಗಿಸುವ ಕುರಿತು ರೂ 6,00,000/-ವನ್ನು ಕಾದಿರಿಸಿರುವುದು ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮದಡಿ ಕ್ರ.ಸಂ 3ರ ಕ್ರಿಯಾಯೋಜನೆಯನ್ನು ಬದಲಾಯಿಸಿ ಕ್ರ.ಸಂ 1ರಲ್ಲಿ ನಿಗದಿಪಡಿಸಿದ ಪ.ಜಾತಿ/ಪ.ಪಂಗಡದವರಿಗೆ ಮನೆ ರಿಪೇರಿಗೆ 22ರ ಬದಲಿಗೆ 32 ಜನರಿಗೆ ನಿಗದಿಪಡಿಸಿ ರೂ 3,20,000/- ಹೆಚ್ಚುವರಿ ಕಾದಿರಿಸುವುದು(ಒಟ್ಟು 12,00,000/-) ಮತ್ತು ಕ್ರ.ಸಂ 6 ರಲ್ಲಿ ಪ.ಜಾತಿ/ಪ.ಪಂಗಡದ 20 ಜನ ಫಲಾನುಭವಿಗಳ ಬದಲಿಗೆ 32 ಫಲನುಭವಿಗಳಿಗೆ ತಲಾ ರೂ. 15,000/-ರಂತೆ ಶೌಚಾಲಯದ ವ್ಯವಸ್ಥೆ ಕುರಿತು ಹೆಚ್ಚುವರಿ ರೂ 1,80,000/-ವನ್ನು ನಿಗದಿಪಡಿಸುವುದು (ಒಟ್ಟು 4,80,000/-)

ನಿರ್ಣಯ: ದಿನಾಂಕ 01-09-2008ರಂದು ನಡೆದ ಸಾಮಾನ್ಯ ಸಭೆಯಲ್ಲಿ 2008-09ನೇಸಾಲಿನ ಎಸ್.ಎಫ್.ಸಿಯ ಶೇ18 ಕ್ರಿಯಾಯೋಜನೆಯಲ್ಲಿ ಸಿದ್ದಪಡಿಸಿದ ಕ್ರಿಯಾಯೋಜನೆಗಳನ್ನು ಮರುಪರಿಶೀಲಿಸಿ ಕ್ರಿಯಾಯೋಜನೆಗಳನ್ನು ಸಲ್ಲಿಸಲು ಮಾನ್ಯ ಜಿಲ್ಲಾಧಿಕಾರಿಗಳು ಮರು ಕಳುಹಿಸಿದ ಕ್ರಿಯಾಯೋಜನೆಗಳನ್ನು ಪುನ: ದಲಿತ ಸಂಘರ್ಷ ಸಮಿತಿಯ ಮುಖಂಡರುಗಳೊಂದಿಗೆ ಚರ್ಚಿಸಿ ದಿನಾಂಕ 31-01-2009ರ ಸಾಮಾನ್ಯ ಸಭೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಿ ಮಂಡಿಸಿದಾಗ ಪುರಸಭೆಯ ಜನಪ್ರತಿನಿಧಿಯವರಾದ ಕು. ಭವಾನಿಯವರನ್ನು ಹೊರತುಪಡಿಸಿ ಉಳಿದ ಎಲ್ಲಾ ಜನಪ್ರತಿನಿಧಿಗಳು ಸರ್ವಾನುಮತದಿಂದ ದಿನಾಂಕ 01-09-2008ರಂದು ಮಾಡಿದ ಕ್ರಿಯಾಯೋಜನೆಗಳಲ್ಲಿ ಯಾವುದೇ ಬದಲಾವಣೆಗೆ ಅವಕಾಶ ನೀಡದೆ ಅಂಗೀಕಾರ ನೀಡುವಂತೆ ಮಾನ್ಯ ಜಿಲ್ಲಾದಿಕಾರಿಯವರನ್ನು ಕೋರಿಕೊಳ್ಳುವುದು ಹಾಗೆಯೇ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯವರು ನೀಡಿದ ಅರ್ಜಿಗಳನ್ನು ಮುಂದಿನ ಅನುದಾನ ಬಿಡುಗಡೆ ಸಂದರ್ಭದಲ್ಲಿ ಪರಿಶೀಲಿಸುವುದೆಂದು ಕು.ಭವಾನಿ ಜನಪ್ರತಿನಿಧಿಯನ್ನು ಹೊರತುಪಡಿಸಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ: 436: ಉಳ್ಳಾಲ ಪುರಸಭೆ ವ್ಯಾಪ್ತಿಯ ಅಬ್ಬಕ್ಕ ದೇವಿ ಭ:ಆದಿನಾಥ ಪಾಶ್ವನಾಥ ಬಸದಿಗೆ ಹೈಮಾಸ್ಟ್‌ದೀಪ ಅಳವಡಿಸುವ ಬಗ್ಗೆ ಕಾರ್ಯದರ್ಶಿ ಆದಿನಾಥ ಪಾಶ್ವನಾಥ ಬಸದಿ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ ಅಳವಡಿಸುವುದಾಗಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ: 437: 2008-09ನೇ ಸಾಲಿನಲ್ಲಿ ಸರಕಾರದಿಂದ ಬಿಡುಗಡೆಗೊಂಡ ವಿವಿಧ ಲೆಕ್ಕ ಶೀರ್ಷಿಕೆಯಡಿ ಕಾಮಗಾರಿಗಳ ಟೆಂಡರು ಅನುಮೋದನೆ ಕುರಿತು.

**ಪ್ಯಾಕೇಜ್ ನಂ.I**

ಇ) 6.(3) ವಾರ್ಡು ಸಂಖ್ಯೆ 26 ರ ಬಬ್ಬುಕಟ್ಟೆ ಪ್ರದೇಶದ ಬಬ್ಬುಕಟ್ಟೆ ಶಾಲೆ ಮತ್ತು ಎ.ಆರ್ ಕಂಪೌಂಡು (ಜಮಾಲ್ ಕಂಪೌಂಡು)ನ ರಸ್ತೆಗೆ ಜಲ್ಲಿ ಹಾಕುವಿಕೆ ಮತ್ತು ಆರ್.ಸಿ.ಸಿ ಚರಂಡಿ ರಚನೆ ಮತ್ತು ಸೇವಂತಿಗುಡ್ಡೆ ಒಂದನೇ ಕ್ರಾಸ್ ಕಾಂಕ್ರೀಟೀಕರಣ.
6.(4) ವಾರ್ಡು ಸಂಖ್ಯೆ 27 ರ ಪರ್ದಕಟ್ಟೆ ರಸ್ತೆಗೆ ಡಾಮಾರೀಕರಣ.
6.(4ಎ) ವಾರ್ಡು ಸಂಖ್ಯೆ 24 ರ ಚೆಂಬುಗುಡ್ಡೆ ಮಸೀದಿಯಿಂದ ಪ್ರಾರಂಭಿಸಿ ಮಿಷನ್ ಚರ್ಚ್ ತನಕ ಪಿಡಬ್ಲ್ಯೂಡಿ ರಸ್ತೆಗೆ ಸಂಪರ್ಕಿಸುವ ರಸ್ತೆ ಡಾಮಾರೀಕರಣ.
**ನಿರ್ಣಯ**: ಈ ಕಾಮಗಾರಿಗಳಿಗೆ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಕನಿಷ್ಟ ದರ (1767462.25) ಶೇ 14.46ಅಧಿಕ ದರ ಸೂಚಿಸಿದ ಗುತ್ತಿಗೆದಾರರಾದ ಶ್ರೀ ನಿಸಾರ್ ಅಹಮ್ಮದ್ ರವರೊಂದಿಗೆ ಚರ್ಚಿಸಲಾಗಿ ಒಪ್ಪಲಾದ 7.99% ಅಧಿಕ ದರದಲ್ಲಿ ಕಾಮಗಾರಿ ನಿರ್ವಹಿಸುವರೇ ಮಂಜೂರಾತಿ ನೀಡಲಾಯಿತು.

**ಪ್ಯಾಕೇಜ್ ನಂ. II**
ಇ) 6.(5) ವಾರ್ಡು ಸಂಖ್ಯೆ 25ರ ಕುತ್ತಾರು ಭಜನಾ ಮಂದಿರ ರಸ್ತೆಯ ಹರೀಶ್ ರವರ ಮನೆ ಸಮೀಪ ಕಾಂಕ್ರೀಟ್ ಚರಂಡಿ ರಚನೆ ಮತ್ತು ಪ್ರಕಾಶ್ ನಗರಕ್ಕೆ ಅಡ್ಡ ರಸ್ತೆ ಡಾಮಾರೀಕರಣ.
ಇ) 6.(13) ವಾರ್ಡು ಸಂಖ್ಯೆ 19ರ ಅನಿಲ ಕಂಪೌಂಡು ಬಾಕಿಮಾರು ದಿನೇಶ್‌ರವರ ಮನೆಯಿಂದ ಪೆಲಿಕ್ಸ್‌ರವರ ಮನೆ ತನಕ ರಸ್ತೆ ಮತ್ತು ತೊಕ್ಕೊಟ್ಟು ಉಳ್ಳಾಲ ಮುಖ್ಯ ರಸ್ತೆಯ ಬಂಗೇರಲೇನ್ ಅಡ್ಡ ರಸ್ತೆಯ ಡಾಮಾರೀಕರಣ.
ಆ) 6.(13) ವಾರ್ಡು ಸಂಖ್ಯೆ 13ರ ಅಜಾದ್ ನಗರ ಮುಖ್ಯ ರಸ್ತೆಯ ಕೊಜಂಬುಹಿತ್ಲು ಎಂಬಲ್ಲಿ ಕಾಂಕ್ರೀಟ್ ರಸ್ತೆ ರಚನೆ ಉಳಿದ ಭಾಗದಲ್ಲಿ ಸಿಲ್‌ಕೋಟ್ ಫೆವರ್ ಪಿನಿಶ್ ಡಾಮಾರೀಕರಣ.

**ನಿರ್ಣಯ:** ಈ ಕಾಮಗಾರಿಗಳಿಗೆ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಕನಿಷ್ಟ ದರ (ರೂ.1749709.45) ಶೇ 14.64ಅಧಿಕ ದರಸೂಚಿಸಿದ ಗುತ್ತಿಗೆದಾರರಾದ ಶ್ರೀ ನಿಸಾರ್ ಅಹಮ್ಮದ್‌ರವರೊಂದಿಗೆ ಚರ್ಚಿಸಲಾಗಿ ಒಪ್ಪಲಾಗಿ 7.99% ಅಧಿಕ ದರದಲ್ಲಿ ಕಾಮಗಾರಿ ನಿರ್ವಹಿಸುವರೇ ಮಂಜೂರಾತಿ ನೀಡಲಾಯಿತು.

**ಪ್ಯಾಕೇಜ್ ನಂ. III**
ಆ) 6.(11) ವಾರ್ಡು ಸಂಖ್ಯೆ 11ರ ಆರ್.ಕೆ ಶೆಟ್ಟಿ ರಸ್ತೆ ಬಿರ್ಲ ಲೇಔಟ್‌ನ ರಸ್ತೆಗೆ ಪೆವರ್ ಪಿನಿಶ್‌ನಿಂದ ಡಾಮಾರೀಕರಣ.
ಆ) 6.(14) ವಾರ್ಡು ಸಂಖ್ಯೆ 11ರ ಧರ್ಮನಗರ ಸುಂದರಿಬಾಗ್ ಶ್ರೀದೇವಿ ಪ್ಯಾನ್ಸಿ ಸ್ಟೋರ್ ರಸ್ತೆ ಡಾಮಾರೀಕರಣ, ಮುಕ್ಕಚೇರಿ ಸುಂದರಿಬಾಗ್ ರಸ್ತೆ ಅಭಿವೃದ್ಧಿ ಮತ್ತು ಒಂಭತ್ತುಕೆರೆ ವಲೇರಿಯನ್ ಡಿಸೋಜರ ಮನೆಯಿಂದ ಮಾರಪ್ಪನವರ ಮನೆವರೆಗೆ ಚರಂಡಿ ರಚನೆ. ಅ) 3.(2) ವಾರ್ಡು ಸಂಖ್ಯೆ 24ರ ಚೆಂಬುಗುಡ್ಡೆ ಪೊಂಕ್ರರವರ ಮನೆಯಿಂದ ಪಿಲಾರು ಮಸೀದಿ ತನಕ ಕಾಂಕ್ರೀಟ್ ಚರಂಡಿ ರಚನೆ, ಚೆಂಬುಗುಡ್ಡೆ ಶಶಿಯಕ್ಕ ಮನೆಯಿಂದ ಹಿಡಿದು ಲಚ್ಚಿಲ್ ಗ್ರೌಂಡು ಜೇಮ್ಸ್ ಮನೆವರೆಗೆ ರಸ್ತೆ ನಿರ್ಮಾಣ ಮಾಡಿ ಡಾಮಾರೀಕರಣ.

**ನಿರ್ಣಯ:**ಈ ಕಾಮಗಾರಿಗಳಿಗೆ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಕನಿಷ್ಟ ದರ (1908599.70) ಶೇ 14.01ಅಧಿಕ ದರಸೂಚಿಸಿದ ಗುತ್ತಿಗೆದಾರರಾದ ಶ್ರೀ ನಿಸಾರ್ ಅಹಮ್ಮದ್ ರವರೊಂದಿಗೆ ಚರ್ಚಿಸಲಾಗಿ ಒಪ್ಪಲಾದ 7.99% ಅಧಿಕ ದರದಲ್ಲಿ ಕಾಮಗಾರಿ ನಿರ್ವಹಿಸುವರೇ ಮಂಜೂರಾತಿ ನೀಡಲಾಯಿತು.

**ಪ್ಯಾಕೇಜ್ ನಂ. IV**
ಆ) 6.(4) ವಾರ್ಡು ಸಂಖ್ಯೆ 4 ರ ಕೊಟ್ಟಾರ ಸೇತುವೆ ಅಡ್ಡ ರಸ್ತೆಯಿಂದ ಯು.ಕೆ ಪದ್ಮನಾಭರವರ ಮನೆ ಎದುರಿನಿಂದ ಬಂಡಸಾಲೆವರೆಗೆ ರಸ್ತೆ ಅಭಿವೃದ್ಧಿ.
ಇ) 6.(2) ವಾರ್ಡು ಸಂಖ್ಯೆ 23 ರ ಕೆರೆಬೈಲು ಕಲ್ಲಾಪು ಸೆವೆನ್‌ಸ್ಟಾರ್ ಇಸ್ಮಾಯಿಲ್ ಅಂಗಡಿಯಿಂದ ಯು.ಟಿ.ಅಹಮ್ಮದ್ ಮನೆಯ ಸಮೀಪದಿಂದ ಸೇವಂತಿ ಗುಡ್ಡೆ ರಸ್ತೆ ಸಂಪರ್ಕಿಸುವುದು.

**ನಿರ್ಣಯ:** ಈ ಕಾಮಗಾರಿಗಳಿಗೆ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಕನಿಷ್ಟ ದರ (1128861.00) ಸೂಚಿಸಿದ ಗುತ್ತಿಗೆದಾರರಾದ ಶ್ರೀ ಸೆಬೆಸ್ಟಿಯನ್ ಡಿಸೋಜ ಇವರು ಸೂಚಿಸಿದ ದರ ಶೇಕಡಾ 3.78 ಅಧಿಕ ದರದಲ್ಲಿ ಕಾಮಗಾರಿ ನಿರ್ವಹಿಸುವರೇ ಮಂಜೂರಾತಿ ನೀಡಲಾಯಿತು.

**ಪ್ಯಾಕೇಜ್ ನಂ. V**
ಆ) 6.(2) ವಾರ್ಡು ಸಂಖ್ಯೆ 2 ರ ಸೋಲಾರ್ ಕ್ಲಬ್ ಎದುರುಗಡೆಯಿಂದ ಜಮೀಲ್ ದಾದಾರವರ ಮನೆಗೆ ಹೋಗುವ ರಸ್ತೆಗೆ ಇಂಟರ್‌ಲಾಕ್ ಅಳವಡಿಸುವುದು.
ಆ) 6.(6) ವಾರ್ಡು ಸಂಖ್ಯೆ 6 ರ ಉಳಿಯ ಮಾರ್ಗತಲೆ ರಸ್ತೆ ಅಭಿವೃದ್ಧಿಗೊಳಿಸಿ ಕಾಂಕ್ರೀಟೀಕರಣ.
ಆ) 6.(1) ಕೋಟೆಪುರ ಸಿ ರಸ್ತೆಯಿಂದ ಎ.ಕೆ.ಮೊಹಿದ್ದೀನ್ ಮನೆಯ ಹತ್ತಿರದಿಂದ ಡಿ ರಸ್ತೆಯವರೆಗೆ ಕಾಲುದಾರಿಗೆ ಕಾಂಕ್ರೀಟೀಕರಣ ಮತ್ತು ಕೋಟೆಪುರ ಸಿ ರಸ್ತೆಯಲ್ಲಿ ಸುಲ್ತಾನ್ ಸರ್ಕಲ್‌ನಿಂದ ಕೋಟೆಪುರ ಸಿ ರಸ್ತೆ ಕಾಮಗಾರಿ.

ನಿರ್ಣಯ:ಈ ಕಾಮಗಾರಿಗಳಿಗೆ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. (ರೂ.2366843.20) ಶೇ 7.99 ಅಧಿಕ ದರಸೂಚಿಸಿದ ಗುತ್ತಿಗೆದಾರರಾದ ಶ್ರೀ ವರದರಾಜ್‌ರವರ ಕೇವಲ ಒಂದು ಟೆಂಡರು ಮಾತ್ರ ಸ್ವೀಕೃತವಾಗಿರುತ್ತದೆ. ಒಂದೇ ಟೆಂಡರು ಬಂದಿರುವುದರಿಂದ ಮಾನ್ಯ ಜಿಲ್ಲಾಧಿಕಾರಿಯವರ ಮಂಜೂರಾತಿ ಪಡೆದು ಕಾಮಗಾರಿ ನಿರ್ವಹಿಸಲು ನಿರ್ಣಯಿಸಲಾಯಿತು.

**ಪ್ಯಾಕೇಜ್ ನಂ. VI**
ಅ) 6.(3) ವಾರ್ಡು ಸಂಖ್ಯೆ 3 ರ ಮೊಗವೀರ ಪಟ್ನ ಜಗನ್ನಾಥ ಪುತ್ರನ್‌ರವರ ಮನೆಯಿಂದ ಸ್ಟಾರ್ ರಾಜರ ಮನೆ ತನಕ ಕಾಂಕ್ರೀಟು ಚರಂಡಿ ರಚನೆ.
ಆ) 6.(7) ವಾರ್ಡು ಸಂಖ್ಯೆ 7 ರ ಉಳ್ಳಾಲ ಪುರಸಭಾ ವ್ಯಾಪ್ತಿಯ ದರ್ಗಾ ಹಿಂಬದಿಯ ಬಂಡಿಕೊಟ್ಯ ಕ್ರಾಸ್‌ನಿಂದ ಮಲರಾಯ ದೇವಸ್ಥಾನದವರೆಗೆ ರಸ್ತೆ ಎತ್ತರಿಸಿ ಕಾಂಕ್ರೀಟಿಕರಣಗೊಳಿಸುವುದು ಮತ್ತು ಮಿಲ್ಲತ್‌ನಗರ ಖತೀಬ್ ಮನೆಯ ಸಮೀಪವಿರುವ ಕಾಲುದಾರಿ ಅಭಿವೃದ್ದಿ ಮತ್ತು ರಸ್ತೆ ಕಾಂಕ್ರೀಟೀಕರಣ.
ಆ) 6.(10) ವಾರ್ಡು ಸಂಖ್ಯೆ 10 ಹಳೇಕೋಟೆ ಓವರ್ ಟ್ಯಾಂಕಿನಿಂದ ಎಂ.ಎಚ್.ಮನೆಯವರೆಗೆ ರಸ್ತೆ ಕಾಂಕ್ರೀಟೀಕರಣ ಮತ್ತು ಹಳೇಕೋಟೆ ಮಸೀದಿ ಬಳಿ ಚರಂಡಿ ರಚನೆ.

**ನಿರ್ಣಯ**:ಈ ಕಾಮಗಾರಿಗಳಿಗೆ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಕನಿಷ್ಟ ದರ (2000521.94) ಸೂಚಿಸಿದ ಶೇ 14.67 ಅಧಿಕ ದರಸೂಚಿಸಿದ ಗುತ್ತಿಗೆದಾರರಾದ ಶ್ರೀ ನಿಸಾರ್ ಅಹಮ್ಮದ್ ರವರೊಂದಿಗೆ ಚರ್ಚಿಸಲಾಗಿ ಒಪ್ಪಲಾದ 7.99% ಅಧಿಕ ದರದಲ್ಲಿ ಕಾಮಗಾರಿ ನಿರ್ವಹಿಸುವರೇ ಮಂಜೂರಾತಿ ನೀಡಲಾಯಿತು.

**ಪ್ಯಾಕೇಜ್ ನಂ. VII**
ಅ) 6.(8) ವಾರ್ಡು ಸಂಖ್ಯೆ 8ರ ಪಾಂಡೆಲಪಕ್ಕ ಮುಖ್ಯ ರಸ್ತೆ ಕಾಂಕ್ರೀಟೀಕರಣ.
ಆ) 6.(9) ವಾರ್ಡು ಸಂಖ್ಯೆ 9 ರ ಸಾಧುಹಿತ್ಲು ರಸ್ತೆಯ ಚರಂಡಿಗೆ ಚಪ್ಪಡಿ ಮುಚ್ಚಿ ಅಭಿವೃದ್ದಿ ಪಡಿಸಿ ಕಾಲುದಾರಿಯನ್ನು ಕಾಂಕ್ರೀಟೀಕರಣಗೊಳಿಸುವುದು.
ಇ) 6.(9) ಬಂಡಸಾಲೆ ರಸ್ತೆ ಕಾಂಕ್ರೀಟೀಕರಣ.

**ನಿರ್ಣಯ**:ಈ ಕಾಮಗಾರಿಗಳಿಗೆ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು.ಕನಿಷ್ಟ ದರ (ರೂ. 1977108.00) ಸೂಚಿಸಿದ ಶೇ 8.02ಅಧಿಕ ದರಸೂಚಿಸಿದ ಗುತ್ತಿಗೆದಾರರಾದ ಶ್ರೀ ಯು.ವಿಜಯ,ಉಳ್ಳಾಲಬೈಲು ರವರೊಂದಿಗೆ ಚರ್ಚಿಸಲಾಗಿ ಒಪ್ಪಲಾದ 7.99% ಅಧಿಕ ದರದಲ್ಲಿ ಕಾಮಗಾರಿ ನಿರ್ವಹಿಸುವರೇ ಮಂಜೂರಾತಿ ನೀಡಲಾಯಿತು.

**ಪ್ಯಾಕೇಜ್ ನಂ. VIII**
ಅ) 6.(12) ವಾರ್ಡು ಸಂಖ್ಯೆ 12 ರ ಮುಕ್ಕಚೇರಿ ಪ್ರದೇಶದ ಹೈದಾರಾಲಿ ನಗರದಿಂದ ಬಾಬು ಕಂಪೌಂಡುವರೆಗಿನ ಪ್ರದೇಶಗಳಲ್ಲಿ ರಸ್ತೆಯನ್ನು ಎತ್ತರಿಸಿ ಕಾಂಕ್ರೀಟು ಮಾಡುವುದು ಮತ್ತು ಚರಂಡಿ ವಿಸ್ತರಣೆ.
ಆ) 6.(15) ವಾರ್ಡು ಸಂಖ್ಯೆ 17ರ ಕೃಷ್ಣನಗರ ಟಿಸಿ ರೋಡು ಮುಖ್ಯ ರಸ್ತೆ ಮಜಲ್ ತಿರುಗುವಲ್ಲಿಯಿಂದ ಕ್ಲಿಕ್ ಚಂದ್ರಕಾಂತರವರ ಮನೆ ತನಕ ಚರಂಡಿ ನಿರ್ಮಿಸಿ ಸ್ಲ್ಯಾಬ್ ಮುಚ್ಚುವುದು ಹಾಗೂ ಕಾಂಕ್ರೀಟೀಕರಣ.
ನಿರ್ಣಯ: ಈ ಕಾಮಗಾರಿಗಳಿಗೆ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಕನಿಷ್ಟ ದರ (ರೂ. 1549863.49) ಸೂಚಿಸಿದ ಶೇ 11.99ಅಧಿಕ ದರಸೂಚಿಸಿದ ಗುತ್ತಿಗೆದಾರರಾದ ಶ್ರೀ ಬಿ.ಎಸ್ ಶರೀಫ್, ಜೋಕಟ್ಟೆ) ರವರೊಂದಿಗೆ ಚರ್ಚಿಸಲಾಗಿ 7.99% ಅಧಿಕ ದರದಲ್ಲಿ ಕಾಮಗಾರಿ ನಿರ್ವಹಿಸುವರೇ ಮಂಜೂರಾತಿ ನೀಡಲಾಯಿತು.

**ಪ್ಯಾಕೇಜ್ ನಂ. IX**
ಅ) 6.(16) ವಾರ್ಡು ಸಂಖ್ಯೆ 18 ತೊಕ್ಕೊಟ್ಟು ಒಳಪೇಟೆ ಓವರ್ ಬ್ರಿಡ್ಜ್ ಹೋಗುವಲ್ಲಿ ರಸ್ತೆ ಚತುಷ್ಪಥ ರಸ್ತೆ ನಿರ್ಮಾಣ.
ಇ) 6.(7) ಮಂಚಿಲ ಸಫರ್ ಕ್ಲಬ್‌ನ ಎದುರಿನಲ್ಲಿರುವ ಕಾಂಕ್ರೀಟ್ ಚರಂಡಿಗೆ ಚರಂಡಿ ಎತ್ತರಿಸಿ ಕಾಂಕ್ರೀಟ್ ಚಪ್ಪಡಿ ಮುಚ್ಚುವುದು ಮತ್ತು ಕಾನ್ವೆಂಟ್ ಎದುರಿನಿಂದ ಜಾಗೃತ ಸೊಸೈಟಿ ತನಕ ಕಾಂಕ್ರೀಟ್ ಚರಂಡಿ ರಚಿಸಿ ಕಾಂಕ್ರೀಟ್ ಚಪ್ಪಡಿ ಮುಚ್ಚುವುದು. ತೊಕ್ಕೊಟ್ಟು ಒಳಪೇಟೆ, ಮಾರ್ಕೆಟು ಬಳಿಯ ಕರ್ನಾಟಕ ಬ್ಯಾಂಕಿನ ಎದುರುಗಡೆ ವಾಹನ ಪಾರ್ಕಿಂಗ್ ಸ್ಥಳಕ್ಕೆ ಇಂಟರ್ ಲಾಕಿಂಗ್ ಅಳವಡಿಸುವುದು ಮತ್ತು ತೊಕ್ಕೊಟ್ಟು ಒಳಪೇಟೆ ಕಾಂಕ್ರೀಟಿನ ಬದಿಯಲ್ಲಿರುವ ಖಾಲಿ ಸ್ಥಳದಲ್ಲಿ ಮತ್ತು ಫುಟ್‌ಪಾತ್‌ಗೆ ಇಂಟರ್‌ಲಾಕ್ ಅಳವಡಿಸುವುದು.

**ನಿರ್ಣಯ**: ಈ ಕಾಮಗಾರಿಗಳಿಗೆ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಕನಿಷ್ಟ ದರ (ರೂ. 1482207-00) ಶೇ 7.25ಅಧಿಕ ದರಸೂಚಿಸಿದ ಗುತ್ತಿಗೆದಾರರಾದ ಶ್ರೀ ಶಿವಪ್ರಸಾದ್ ಕೊಲ್ಯರವರಿಗೆ ಕಾಮಗಾರಿ ನಿರ್ವಹಿಸುವರೇ ಮಂಜೂರಾತಿ ನೀಡಲಾಯಿತು.

**ಪ್ಯಾಕೇಜ್ ನಂ. X**
ಅ) 6.(17) ವಾರ್ಡು ಸಂಖ್ಯೆ 21ರ ಮಾರ್ಗತಲೆ ಮಂಚಿಲ ಮಸೀದಿ ಸಮೀಪ ಅಡ್ಡರಸ್ತೆ ಕಾಂಕ್ರೀಟೀಕರಣ (ಮೋತಿ ಡಿಸೋಜ ಮನೆ ಹತ್ತಿರದಿಂದ ಬಾಬು ಮನೆ ತನಕ) ಮತ್ತು ರೈಲ್ವೆ ಸ್ಟೇಶನ್ ರಸ್ತೆ ಬದಿ ಚರಂಡಿ ರಚನೆ.
ಇ) 6.(1) ವಾರ್ಡು ಸಂಖ್ಯೆ 22ರ ಕಲ್ಲಾಪು ಮೋನಾ ಮೆನ್‌ಷನ್ ಅಡ್ಡ ರಸ್ತೆ ಅಭಿವೃದ್ದಿ.
ಇ) 6.(8) ಉಳ್ಳಾಲ ರಿಕ್ಷಾ ನಿಲ್ದಾಣದಿಂದ ಪೋಲೀಸ್ ಸ್ಟೇಶನ್ ತನಕ ಫುಟ್‌ಪಾತ್ ನಿರ್ಮಾಣ.
ಇ) 6.(11) ಮೇಲಂಗಡಿ ಹೊಸಪಳ್ಳಿ – ಮಾಸ್ತಿಕಟ್ಟೆ ರಸ್ತೆಯ ಕಾಂಕ್ರೀಟ್ ಮೋರಿ ಮತ್ತು ಚರಂಡಿ ರಚನೆ.
ಈ ಕಾಮಗಾರಿಗಳಿಗೆ ಕನಿಷ್ಟ ದರ (1665149.10) ಸೂಚಿಸಿದ ಶೇ 19.82ಅಧಿಕ ದರಸೂಚಿಸಿದ ಗುತ್ತಿಗೆದಾರರಾದ ಶ್ರೀ ಅಬ್ದುಲ್ ರಹಿಮಾನ್ ಕಾಟಿಪಳ್ಳರವರೊಂದಿಗೆ ಚರ್ಚಿಸಲಾಗಿ 7.95% ಅಧಿಕ ದರದಲ್ಲಿ ಕಾಮಗಾರಿ ನಿರ್ವಹಿಸುವರೇ ಮಂಜೂರಾತಿ ನೀಡಲಾಯಿತು.

**ಪ್ಯಾಕೇಜ್ ನಂ. XI**
ಇ) 6.(10) ಮೇಲಂಗಡಿ ಹೊಸಪಳ್ಳಿಯಿಂದ ಹೋಟೇಲು ಪಿರ್ದೋಸ್ ರಸ್ತೆ ತನಕ ಕಾಂಕ್ರೀಟೀಕರಣ.
ನಿರ್ಣಯ: ಈ ಕಾಮಗಾರಿಗಳಿಗೆ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಕನಿಷ್ಟ ದರ (ರೂ. 2623721.00) ಸೂಚಿಸಿದ ಶೇ 14.79ಅಧಿಕ ದರಸೂಚಿಸಿದ ಗುತ್ತಿಗೆದಾರರಾದ ಶ್ರೀ ನಿಸಾರ್ ಅಹಮ್ಮದ್ ರವರೊಂದಿಗೆ ಚರ್ಚಿಸಲಾಗಿ 7.99% ಅಧಿಕ ದರದಲ್ಲಿ ಕಾಮಗಾರಿ ನಿರ್ವಹಿಸುವರೇ ಮಂಜೂರಾತಿ ನೀಡಲಾಯಿತು.

**ಪ್ಯಾಕೇಜ್ ನಂ. XII**
ಅ) 3.(1) ವಾರ್ಡು ಸಂಖ್ಯೆ 20 ರ ಉಳ್ಳಾಲ ಕಾಪಿಕಾಡು 1ನೇ ಅಡ್ಡ ರಸ್ತೆ ಅಗಲೀಕರಣ ಮತ್ತು ಗಾಂಧಿನಗರ ಅಡ್ಡ ರಸ್ತೆ ಅಭಿವೃದ್ಧಿ.
ಅ) 3.(3) ವಾರ್ಡು ಸಂಖ್ಯೆ 15 ಉಳ್ಳಾಲ ಅಬ್ಬಂಜರ ಪರಿಶಿಷ್ಟ ಕಾಲನಿಯಲ್ಲಿ ಚರಂಡಿ, ರಸ್ತೆ ಅಭಿವೃದ್ಧಿ.
ಇ) 6.(12) ವಾರ್ಡು ಸಂಖ್ಯೆ 15ರ ಅಬ್ಬಕ್ಕ ನಗರ 2ನೇ ಅಡ್ಡ ರಸ್ತೆ ಒಂಬತ್ತುಕರೆ ಶಾಲೆ ಮುಖ್ಯ ರಸ್ತೆಯಿಂದ ವೈದ್ಯನಾಥ ದೇವಸ್ಥಾನದ ಬಳಿ ರಸ್ತೆ ಅಭಿವೃದ್ಧಿ.
ಈ ಕಾಮಗಾರಿಗಳಿಗೆ ಕನಿಷ್ಟ ದರ( ರೂ. 1444885.95 )ಸೂಚಿಸಿದ ಶೇ 11.82 ಅಧಿಕ ದರಸೂಚಿಸಿದ ಗುತ್ತಿಗೆದಾರರಾದ ಶ್ರೀ ವಿಶ್ವನಾಥ ಶೆಟ್ಟಿರವರೊಂದಿಗೆ ಚರ್ಚಿಸಲಾಗಿ 7.9% ಅಧಿಕ ದರದಲ್ಲಿ ಕಾಮಗಾರಿ ನಿರ್ವಹಿಸುವರೇ ಮಂಜೂರಾತಿ ನೀಡಲಾಯಿತು.

ಪ್ಯಾಕೇಜ್ ನಂ. ಫಿಖಖಖ
ಅ) 5.(1) ಚೆಂಬುಗುಡ್ಡೆ ಮತ್ತು ಉಳ್ಳಾಲ ಸಾರ್ವಜನಿಕ ಸ್ಮಶಾನ ಭೂಮಿ ಅಭಿವೃದ್ಧಿ. ಉಳ್ಳಾಲ ಸಾರ್ವಜನಿಕ ಸ್ಮಶಾನಕ್ಕೆ ಸಿಲಿಕಾನ್ ವೆಸೆಲ್ ಒದಗಿಸಿರುವುದು ಹಾಗ ಚೆಂಬುಗುಡ್ಡೆ ಸಾರ್ವಜನಿಕ ಸ್ಮಶಾನಕ್ಕೆ ಕಟ್ಟಿಗೆ ದಾಸ್ತಾನು ಕೊಠಡಿ ರಚನೆ
ನಿರ್ಣಯ: ಟೆಂಡರನ್ನು ಅವಧಿಯನ್ನು ಮುಂದುವರಿಸಲು ನಿರ್ಣಯಿಸಲಾಯಿತು.

**ಪ್ಯಾಕೇಜ್ ನಂ. XIV**
ಇ) 6.(6) ತೊಕ್ಕೊಟ್ಟು ಜಂಕ್ಷನ್‌ಗೆ ಹೈಮಾಸ್ಟ್ ಲೈಟು ಒದಗಿಸುವುದು.
**ನಿರ್ಣಯ**: ಟೆಂಡರ್ ಅವಧಿಯನ್ನು ಮುಂದುವರಿಸಲು ನಿರ್ಣಯಿಸಲಾಯಿತು.

**ಪ್ಯಾಕೇಜ್ ನಂ. XV**
ಉಳ್ಳಾಲ ಪುರಸಭಾ ವ್ಯಾಪ್ತಿ ತೊಕ್ಕೋಟ್ಟು ಬಸ್ಸು ನಿಲ್ದಾಣದಲ್ಲಿ ಸಾರ್ವಜನಿಕರ ತೆರೆದಬಾವಿ ರಚನೆ

**ನಿರ್ಣಯ**: ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಟೆಂಡರುದಾರರು ಶ್ರೀ ಹಮೀದ್ ಸುರತ್ಕಲ್ ಇವರು ಸೂಚಿಸಿದ ದರ ಅಂದಾಜುಪಟ್ಟಿಗಿಂತ ಶೇಕಡಾ 19 ಅಧಿಕ ಕನಿಷ್ಟ ದರವಾಗಿದ್ದು, 2008-09ನೇ ಎಸ್.ಆರ್. ದರಕ್ಕಿಂತ ಶೇಕಡಾ ಅಧಿಕವಾಗಿರುವುದರಿಂದ ಸದ್ರಿ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

**ಕುಡ್ಸೆಂಪ್ ನಿಧಿ XVI**
ಉಳ್ಳಾಲ ಪುರಸಭಾ ವ್ಯಾಪ್ತಿಯ ಉಳ್ಳಾಲ ಉಳಿಯ ದೇವಸ್ಥಾನ ರಸ್ತೆ ಡಾಮಾರೀಕರಣ
**ನಿರ್ಣಯ**: ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಕನಿಷ್ಟ ದರ (2116476.54) ಸೂಚಿಸಿದ ಶೇ 40.99ಅಧಿಕ ದರ ಸೂಚಿಸಿದ ಶ್ರೀ ನಿಸಾರ್ ಅಹಮ್ಮದ್, ಸುರತ್ಕಲ್ ಅಧಿಕ ದರ ಮಂಜೂರು ಮಾಡಲು ಪುರಸಬಾ ಅಧಿಕಾರ ವ್ಯಾಪ್ತಿಯಲ್ಲಿ ಬರುದಿಲ್ಲವಾದುದರಿಂದ ಮಾನ್ಯ ಜಿಲ್ಲಾದಿಕಾರಿಯವರ ಮಂಜೂರಾತಿಗೆ ಕಳುಹಿಸುವ ಬಗ್ಗೆ ನಿರ್ಣಯಿಸಲಾಯಿತು.

ಪ್ಯಾಕೇಜ್ ನಂ. **XV II**
ಪ್ರಾಕೃತಿಕ ವಿಕೋಪ 2007-08 ದುರಸ್ತಿ ಕಾಮಗಾರಿ ಲೆಕ್ಕ ಶೀರ್ಷಿಕೆ
ಮಂಗಳೂರು ತಾಲ್ಲೂಕು ಉಳ್ಳಾಲ ಪುರಸಭಾ ವ್ಯಾಪ್ತಿ ಬಬ್ಬುಕಟ್ಟೆ ದ.ಕ.ಜಿ.ಪ ಪ್ರೌಢಶಾಲೆ ಹಿಂಬದಿ ರಸ್ತೆ ದುರಸ್ತಿ
**ನಿರ್ಣಯ**: ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಶ್ರೀ ಆಶ್ರಫ್ ಮುಲ್ಕಿ ಇವರು ಕನಿಷ್ಟ ದರ ಅಂದಾಜುಪಟ್ಟಿಯ ದರ ಶೇಕಡಾ 17.99% ಅಧಿಕ ದರವನ್ನು ಸೂಚಿಸಿರುತ್ತಾರೆ. ಅಂದಾಜುಪಟ್ಟಿಯಲ್ಲು ಏರಿಯಾ ವೆಯ್ಟೇಜ್ 10% ಸೇರಿಸದೆ ಇರುವುದರಿಂದ ಸದಿ 10% ಸೇರಿಸಿ ಒಟ್ಟು 17.99 ಅಧಿಕ ದರದಲ್ಲಿ ಮಂಜೂರು ಮಾಡುವರೇ ನಿರ್ಣಯಿಸಲಾಯಿತು.

ವಿಷಯ: 438: ಉಳ್ಳಾಲ ಪುರಸಭೆ ವ್ಯಾಪ್ತಿಯಲ್ಲಿ ಪುರಸಭಾ ನಿಧಿಯಿಂದ ನಿರ್ವಹಿಸುವ ಈ ಕೆಳಗಿನ ಕಾಮಗಾರಿಗಳಿಗೆ ಬಂದ ಟೆಂಡರುಗಳನ್ನು ಮಂಜೂರು ಮಾಡುವ ಕುರಿತು.
(1) ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ 1) ಕಾಫಿಕಾಡು ಲಕ್ಷ್ಮಿ ಗ್ಯಾರೇಜ್ ಬಳಿ 2) ನಾಗಕನ್ನಿಕಾ ರಕ್ತೇಶ್ವರಿ ಗುಡಿ ಮುಂದೆ 3) ಎ.ಎಸ್.ಆರ್. ರೋಡು ಪಕ್ಕದಲ್ಲಿ 4) ಕಲ್ಲಾಪು ನಾಗನಕಟ್ಟೆ ಬಳಿ 5) ಒಂಬತ್ತುಕೆರೆ ಆಶ್ರಯಸೈಟು ಕೃಷ್ಣಪ್ಪರವರ ಮನೆ ಹತ್ತಿರ 6) ಧರ್ಮನಗರ ಬೊಟ್ಟು ನಜೀರ್ ಮನೆ ಎದುರುಗಡೆ ಕೊಳವೆಬಾವಿ ನಿರ್ಮಿಸುವುದು.

ನಿರ್ಣಯ: ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಶ್ರೀ ಆಲ್ವಿನ್ ಮಿನೇಜಸ್ ಕಲ್ಲಬೆಟ್ಟು, ಮೂಡಬಿದ್ರೆ ಇವರು ಸೂಚಿಸಿದ ಅಂದಾಜುಪಟ್ಟಿ ದರಗಿಂತ 7.99% ಅಧಿಕ ಕನಿಷ್ಟ ದರವಾಗಿದ್ದು, ಸದ್ರಿ ದರವನ್ನು ಚರ್ಚಿಸಿ ಮಂಜೂರು ಮಾಡಲು ನಿರ್ಣಯಿಸಲಾಗಿದೆ.

(2) ಉಳ್ಳಾಲ ಪುರಸಭಾ ವ್ಯಾಪ್ತಿಯ ತೊಕ್ಕೊಟ್ಟು ಸಂತ ಸಬೆಸ್ಟಿಯನ್ ಪ್ರೌಢಶಾಲೆಯ ಆಟದ ಮೈದಾನದ ಬಳಿ ಸೆಮಿ ಹೈಮಾಸ್ಟ್ ಕಂಬ ಅಳವಡಿಸಿ 400ವ್ಯಾಟ್ಸ್‌ನ 4 ಮೆಟಲ್ ಹೈಲ್ಯಾಡ್ ದಾರಿದೀಪ ಅಳವಡಿಸುವುದು.
ನಿರ್ಣಯ: ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಶ್ರೀ ವಿಶ್ವನಾಥ, ವಿಶ್ವ ಇಲೆಕ್ಟ್ರಿಕಲ್ಸ್, ಇವರು ಸೂಚಿಸಿದ ಅಂದಾಜುಪಟ್ಟಿ ದರಗಿಂತ 7.5% ಅಧಿಕ ಮೊತ್ತ ರೂ 5700/- ಕೋಟೇಶನು ಕನಿಷ್ಟ ದರವಾಗಿದ್ದು, ಸದ್ರಿ ದರವನ್ನು ಚರ್ಚಿಸಿ ಮಂಜೂರು ಮಾಡಲು ನಿರ್ಣಯಿಸಲಾಗಿದೆ.

(3) ವಿಷಯ: 438(3) ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ 6ನೇ ವಾರ್ಡಿನ 10 ಉಳಿಯ ಬಬ್ಬುಟ್ಟಿ ಡಿಸೋಜರ ಮನೆ ಬಳಿಯಿಂದ ರೈಮಂಡ್ ಡಿಸೋಜರ ಮನೆ ಬಳಿ 2) ಮಾರ್ಗತಲೆ 2ನೇ ಸೇತುವೆ ಬಳಿಯಿಂದ ಡೈನಾ ಡಿಸೋಜರವರ ಮನೆಯವರೆಗೆ 3) ಹೊಯಿಗೆ ಪಡ್ಡಾಯಿ ರಸ್ತೆಯಿಂದ ಬಬ್ಬುಟ್ಟಿ ಡಿಸೋಜರವರ ಮನೆಯವರೆಗೆ 2 ಇಂಚಿನ ಕೊಳವೆ ವಿಸ್ತರಣೆ ಬಗ್ಗೆ.
ನಿರ್ಣಯ: ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಶ್ರೀ ಯು,ವಿಜಯ ಉಳ್ಳಾಲ ಇವರು ಸೂಚಿಸಿದ ಅಂದಾಜುಪಟ್ಟಿ 7ಶೇ ಅಧಿಕ ದರದಲ್ಲಿ ಕಾಮಗಾರಿ ನಿರ್ವಹಿಸುವರೇ ಮಂಜೂರಾತಿ ನೀಡಲು ನಿರ್ಣಯಿಸಲಾಗಿದೆ.

(4) ಉಳ್ಳಾಲ ಪುರಸಭಾ ವ್ಯಾಪ್ತಿಯ 27ನೇ ವಾರ್ಡಿನ ಮುಡಿಪೋಡಿ ಎಂಬಲ್ಲಿ ಮಳೆನೀರು ಹರಿಯುವ ತೋಡಿನ ಒಂದು ಬದಿ ಎತ್ತರಿಸುವುದು
ನಿರ್ಣಯ: ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಶ್ರೀ ಎನ್. ಹಮೀದ್ ಇವರು ಸೂಚಿಸಿದ ಅಂದಾಜುಪಟ್ಟಿ ದರಗಿಂತ 7% ಅಧಿಕ ಕನಿಷ್ಟ ದರವಾಗಿದ್ದು, ಸದ್ರಿ ದರವನ್ನು ಚರ್ಚಿಸಿ ಮಂಜೂರು ಮಾಡಲು ನಿರ್ಣಯಿಸಲಾಗಿದೆ

(5) ಉಳ್ಳಾಲ ಪುರಸಭಾ ವ್ಯಾಪ್ತಿಯ 9ನೇ ವಾರ್ಡಿನ ಗುಡ್ಡೆಗೆ ನೀರು ಸರಬರಾಜುಮಾಡಲು ಮಿಲ್ಲತ್ ನಗರ ಸಂಕದಿಂದ ಯು.ಎನ್.ಬಶೀರ್ ಮನೆತನಕ 2ಇಂಚಿನ ಹೆಚ್ಚುವರಿ ಕೊಳವೆಸಾಲು ಅಳವಡಿಸುವುದು
ನಿರ್ಣಯ: ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಶ್ರೀ ಬಿ.ಎಸ್.ಶರೀಫ್ ಇವರು ಸೂಚಿಸಿದ ಅಂದಾಜುಪಟ್ಟಿ ದರಗಿಂತ 7.99% ಅಧಿಕ ಕನಿಷ್ಟ ದರವಾಗಿದ್ದು, ಸದ್ರಿ ದರವನ್ನು ಚರ್ಚಿಸಿ ಮಂಜೂರು ಮಾಡಲು ನಿರ್ಣಯಿಸಲಾಗಿದೆ.

(6) ಉಳ್ಳಾಲ ಪುರಸಭಾ ವ್ಯಾಪ್ತಿಯ 16ನೇ ವಾರ್ಡು ವಿದ್ಯಾರಣ್ಯ ನಗರ ಹೊಸಕರಿಯ ಎಂಬಲ್ಲಿ 100ಮೀಟರ್ ಚರಂಡಿಯನ್ನು ವಿಸ್ತರಿಸುವುದು.
ನಿರ್ಣಯ: ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಶ್ರೀ ಬಿ.ಎಂ.ಆಸೀಫ್ ಇವರು ಸೂಚಿಸಿದ ಅಂದಾಜುಪಟ್ಟಿ ದರಗಿಂತ 7.99% ಅಧಿಕ ಕನಿಷ್ಟ ದರವಾಗಿದ್ದು, ಸದ್ರಿ ದರವನ್ನು ಚರ್ಚಿಸಿ ಮಂಜೂರು ಮಾಡಲು ನಿರ್ಣಯಿಸಲಾಗಿದೆ.

(7) ಉಳ್ಳಾಲ ಪುರಸಭಾ ವ್ಯಾಪ್ತಿಯ ನಿತ್ಯಾಧರ ನಗರ ಶಾಲೆಯ ಬಳಿ ಸೆಮಿ ಹೈಮಾಸ್ಟ್ ಕಂಬ ಅಳವಡಿಸಿ 400 ವ್ಯಾಟ್ಸ್ 3 ಮೆಟಲ್ ಹೈಲ್ಯಾಡ್ ದಾರಿದೀಪ ಅಳವಡಿಸುವುದು.
ನಿರ್ಣಯ: ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಶ್ರೀ ಕೆ.ವಿಶ್ವನಾಥ, ವಿಶ್ವ ಎಲೆಕ್ಟ್ರಿಕಲ್ಸ್, ಕೋಡಿಕಲ್ ಇವರು ಸೂಚಿಸಿದ ಅಂದಾಜುಪಟ್ಟಿ ದರಗಿಂತ 7.5% ಅಧಿಕ ಮತ್ತು ಕೋಟೇಶನು ದರ ರೂ 5700/- ದರವಾಗಿದ್ದು, ಸದ್ರಿ ದರವನ್ನು ಚರ್ಚಿಸಿ ಮಂಜೂರು ಮಾಡಲು ನಿರ್ಣಯಿಸಲಾಗಿದೆ.

(8) ಉಳ್ಳಾಲ ಪುರಸಭಾ ವ್ಯಾಪ್ತಿಯ ವಾರ್ಡುನಂಬ್ರ:4 ಜನಶಕ್ತಿ ಅಂಗನವಾಡಿ ಕೊಳವೆ ವಿಸ್ತರಣೆ, ಅಳೇಕಲ ಮೇಸ್ತ್ರಿ ಹಂಸ ಮತ್ತು ಪೌಲ್ ಡಿಸೋಜರ ಮನೆ ಬಳಿ ಕೊಳವೆ ವಿಸ್ತರಣೆ, ತೊಕ್ಕೊಟ್ಟು ಬಸ್ಸು ನಿಲ್ದಾಣದ ಕುಡಿಯುವ ನೀರಿನ ಕೊಳವೆ ವಿಸ್ತರಣೆ, ವಾರ್ಡುಸಂಖ್ಯೆ 26 ಮುದರನ ಮನೆಗೆ ಹೋಗುವ ರಸ್ತೆಯಲ್ಲಿ ಪೈಪು ವಿಸ್ತರಣೆ, 2ನೇ ವಾರ್ಡಿನ ಶಾರದನಿಕೇತನ ಬಳಿ ಕೊಳವೆ ವಿಸ್ತರಣೆ ಮತ್ತು ಸೇವಂತಿಗುಡ್ಡೆ 1ನೇ ಕ್ರಾಸ್ ರಸ್ತೆಯ ಕೊನೆಯಭಾಗದಲ್ಲಿ ಪೈಪುವಿಸ್ತರಣೆ ಪಿಲಾರು ಮಸೀದಿ ಬಳಿ ಹೊಸ ಕೊಳವೆಬಾವಿ ಪೈಪುಲೈನು ವಿಸ್ತರಣೆ, ಹಳೇಕೋಟೆ ರಾಜೀವಿಯವರ ಮನೆಯಿಂದ ಬಶೀರ್ ಮನೆವರೆಗೆ ಮಾರ್ಗತಲೆ ರಸ್ತೆ ಬಳಿ 3 ಸಾರ್ವಜನಿಕ ನಳ್ಳಿಯನ್ನು ಬದಲಾಯಿಸುವ ಬಗ್ಗೆ.
ನಿರ್ಣಯ: ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಗುತ್ತಿಗೆದಾರರಾದ ಶ್ರೀ ವಿಜಯ ಉಳ್ಳಾಲಬೈಲು ಇವರು ಸೂಚಿಸಿದ ದರ ಅಂದಾಜಲುಪಟ್ಟಿ ದರದ ಶೇ 7 ಅಧಿಕ ಕನಿಷ್ಟ ದರವಾಗಿದ್ದು, ಸದ್ರಿ ದರವನ್ನು ಮಂಜೂರು ಮಾಡಲು ನಿರ್ಣಯಿಸಲಾಯಿತು.

ವಿಷಯ: 439: 2009-2010 ಸಾಲಿನ ವಾರ್ಷಿಕ ದುರಸ್ತಿ, ನಿರ್ವಹಣೆ ಹಾಗೂ ಖರೀದಿ ಬಗ್ಗೆ ಟೆಂಡರುಗಳನ್ನು ಕರೆಯುವ ಬಗ್ಗೆ .
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ವಾರ್ಷಿಕ ಟೆಂಡರುಗಳನ್ನು ಕರೆಯುವುದಾಗಿ ನಿರ್ಣಯಿಸಲಾಯಿತು.

ವಿಷಯ: 440: ಉಳ್ಳಾಲ ಪುರಸಭಾ ಅಧೀನಕ್ಕೊಳಪಟ್ಟ ತೊಕ್ಕೋಟ್ಟು ಬಸ್ಸು ನಿಲ್ದಾಣದಲ್ಲಿ ಹಾದು ಹೋಗುವ ಎಲಾ ಬಸ್ಸುಗಳಿಗೆ ದಿನ ಒಂದರ ಬಸ್ಸು ನಿಲ್ದಾಣಫೀಸು ನಿಗದಿಪಡಿಸಿ ವಸೂಲಿ ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಪುರಸಭೆಯಿಂದಲೇ ವಸೂಲಿ ಮಾಡುವುದಾಗಿ ನಿರ್ಣಯಿಸಲಾಯಿತು.

ಅಧ್ಯಕ್ಷರ ಅನುಮತಿ ಮೇರೆಗೆ ಬರಬಹುದಾದ ಇತರ ವಿಷಯಗಳು.
ವಿಷಯ:441: ಉಳ್ಳಾಲ ಗುತ್ತಿನ ಮನೆಯ ಬಳಿಯಿಂದ ಕಲ್ಲಾಪು ಅಂಬತಡಿ ರಸ್ತೆಗೆ ಹೋಗುವ ದಾರಿಯ ಬದಿಗೆ ಕಾಂಕ್ರೀಟು ತಡೆಗೋಡೆ ಹಾಗೂ ಕಾಲುಸಂಕ ನಿರ್ಮಿಸುವ ಕುರಿತು ಸ್ಥಳೀಯ ಸದಸ್ಯರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 442: ಉಳ್ಳಾಲ ಪುರಸಭಾ ವ್ಯಾಪ್ತಿಯ 8ನೇ ವಾರ್ಡು ಮಾರ್ಗತಲೆ ಸೇತುವೆ ಬಳಿಯಿಂದ ಅರ್ಚಿ ಡಿಸೋಜ ಮನೆತನಕ ರಸ್ತೆ ಬದಿಗೆ 20ಮೀಟರ್ ಕಪ್ಪು ಕಲ್ಲಿನಿಂದ ಬದಿ ಕಟ್ಟಿ 20ಲೋಡು ಮಣ್ಣು ಹಾಕಿ ಸರಿಪಡಿಸುವ ಕುರಿತು ಸ್ಥಳೀಯ ಸದಸ್ಯರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 443: 2006–07ನೇ ಸಾಲಿನ 12ನೇ ಹಣಕಾಸು ಯೋಜನೆಯ ರಸ್ತೆ ಮತ್ತು ಸೇತುವೆ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆಗೊಂಡ ರೂ 12–00ಲಕ್ಷ ಅನುದಾನದಡಿ ಉಳಿಕೆ ಮೊತ್ತ ರೂ 1.95 ಲಕ್ಷಕ್ಕೆ ಕ್ರಿಯಾಯೋಜನೆ ರಚಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಉಳ್ಳಾಲ ಪುರಸಭಾ ವ್ಯಾಪ್ತಿಯ ದರ್ಗಾರಸ್ತೆಯ 1ನೇ ಅಡ್ಡರಸ್ತೆ ಶೀನಾ ಕಂಪೌಂಡು ರಸ್ತೆ ಅಭಿವೃದ್ದಿ ಪಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 444: ಉಳ್ಳಾಲ ಪುರಸಭಾ ವ್ಯಾಪ್ತಿಯ ಕೋಡಿ ಕೆಳಗಿನಬೀದಿ ಕಿರುನೀರು ಸರಬರಾಜು ಯೋಜನೆಯ ಎರಡು ಕಿರು ಬೋರ್‌ವೆಲ್‌ನಲ್ಲಿ ಕೆಸರು ಮಣ್ಣು ಇದ್ದು ನೀರು ಕಡಿಮೆ ಬರುವುದರಿಂದ ಸದಿ ಬೋರ್‌ವೆಲ್ ಗಳನ್ನು ಶುಚಿಗೊಳಿಸುವ ಬಗ್ಗೆ ಪಂಪುಚಾಲಕರು ಮತ್ತು ಕಿರಿಯ ಅಬಿಯಂತರರ ವರದಿ ಕುರಿತು,
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 445: ಉಳ್ಳಾಲ ಪುರಸಭಾ ವ್ಯಾಪ್ತಿಯ 20ನೇ ವಾರ್ಡಿನ ಕಾಪಿಕಾಡು ಪ್ರದೇಶಕ್ಕೆ ನೀರಿನ ಅಭಾವವಿರುವುದರಿಂದ ಕಾಫಿಕಾಡು 2ನೇ ಅಡ್ಡರಸ್ತೆ ತಿರುಗುವಲ್ಲಿ ಹೊಸಕೊಳವೆ ಬಾವಿಯನ್ನು ಕೊರೆಯುವ ಬಗ್ಗೆ ಸ್ಥಳೀಯ ಸದಸ್ಯರಾದ ಕು.ಭವಾನಿ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕೊಳವೆಬಾವಿ ಕೊರೆಯುವುದಾಗಿ ನಿರ್ಣಯಿಸಲಾಯಿತು.

ವಿಷಯ:446: ಉಳ್ಳಾಲ ಪುರಸಭಾ ವ್ಯಾಪ್ತಿಯು 20ನೇ ವಾರ್ಡು ಕಾಫಿಕಾಡು ಲಕ್ಷ್ಮಿ ಗ್ಯಾರೇಜು ಬಳಿ ಇರುವ ಕೊಳವೆಬಾವಿಗೆ ಒಂದೂವರೆ ಆಶ್ವಶಕ್ತಿ 19ಸ್ಟೇಜ್ ಮೋಟಾರು ಪಂಪನ್ನು ಅಳವಡಿಸಿ ಪೆನಲ್ ಬೋರ್ಡು ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ ಪಂಪುಚಾಲಕರು ಮತ್ತು ಕಿರಿಯ ಅಬಿಯಂತರರ ವರದಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ಅಂದಾಜುಪಟಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:447: ಉಳ್ಳಾಲ ಪುರಸಭಾ ವ್ಯಾಪ್ತಿಯ 20ನೇ ವಾರ್ಡು ಗಾಂಧಿನಗರ ಈಶ್ವರಾನಂದ ಭಜನಾ ಮಂದಿರದ ಬಳಿ ಇರುವ ಕಿರುನೀರು ಕೊಳವೆಬಾವಿಯಲ್ಲಿ ನೀರು ಆಳಕ್ಕೆ ಹೋಗಿರುವುದರಿಂದ 24ಮೀ 2ಇಂಚಿನ ಜಿ.ಐ ಕೊಳವೆ ಅಳವಡಿಸುವ ಬಗ್ಗೆ ಪಂಪುಚಾಲಕರು ಮತ್ತು ಕಿರಿಯ ಅಭಿಯಂತರರ ವರದಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಳವಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 448: ಉಳ್ಳಾಲ ಪುರಸಭಾ ವ್ಯಾಪ್ತಿಯ ಈ ಕೆಳಗಿನ ಸ್ಥಳಗಳಲ್ಲಿ ತೆರೆದಬಾವಿಯಿಂದ ಹೂಳುತೆಗೆದು ಸ್ವಚ್ಛಗೊಳಿಸುವ ಕಾಮಗಾರಿಯನ್ನು ನಿರ್ವಹಿಸಲಾಗಿದ್ದು, ಈ ಬಗ್ಗೆ ಘಟನೋತ್ತರ ಮಂಜೂರಾತಿ ನೀಡುವ ಕುರಿತು.

1) ಉಳ್ಳಾಲ ಪ್ರಾಥಮಿಕ ಆರೋಗ್ಯ ಕೇಂದ್ರದ ಬಳಿ ಇರುವ ತೆರೆದಬಾವಿ
   ನಿರ್ಣಯ: ಈ ಬಗ್ಗೆ ಕರೆಯಲಾದ ಕೋಟೇಶನುಗಳಲ್ಲಿ ಅತೀ ಕಡಿಮೆ ದರ ನಮೂದಿಸಿದ ಶ್ರೀ ಕುಂಞಬಾವ ಮೇಲಂಗಡಿ ಇವರ ದರ ರೂ 4000–00ಕ್ಕೆ ಒಪ್ಪಿ ಘಟನೋತ್ತರ ಮಂಜೂರಾತಿ ನೀಡಲು ಮತ್ತು ಬಿಲ್ಲು ಪಾವತಿ ಮಾಡುವುದಾಗಿ ನಿರ್ಣಯಿಸಲಾಯಿತು.

2) ಉಳ್ಳಾಲ ಪುರಸಭಾ ವ್ಯಾಪ್ತಿಯ ಪಂಡಿತಹೌಸ್ ಎಂಬಲ್ಲಿ ತೆರೆದಬಾವಿ
   ನಿರ್ಣಯ: ಈ ಬಗ್ಗೆ ಕರೆಯಲಾದ ಕೋಟೇಶನುಗಳಲ್ಲಿ ಅತೀ ಕಡಿಮೆ ದರ ನಮೂದಿಸಿ ಶ್ರೀ ಕುಂಞಬಾವ ಮೇಲಂಗಡಿ ಇವರ ದರ ರೂ 4300–00ಕ್ಕೆ ಒಪ್ಪಿ ಘಟನೋತ್ತರ ಮಂಜೂರಾತಿ ನೀಡಲು ಮತ್ತು ಬಿಲ್ಲು ಪಾವತಿ ಮಾಡುವುದಾಗಿ ನಿರ್ಣಯಿಸಲಾಯಿತು.

(3) ಉಳ್ಳಾಲ ಪುರಸಭಾ ವ್ಯಾಪ್ತಿಯ ಮೋಗವೀರಪಟ್ನ ಶಾಲಾ ವಠಾರದಲ್ಲಿರುವ ತೆರೆದಬಾವಿ
ನಿರ್ಣಯ: ಈ ಬಗ್ಗೆ ಕರೆಯಲಾದ ಕೋಟೇಶನುಗಳಲ್ಲಿ ಅತೀ ಕಡಿಮೆ ದರ ನಮೂದಿಸಿ ಶ್ರಿ ಕುಂಞಬಾವ ಮೇಲಂಗಡಿ ಇವರ ದರ ರೂ 4000–00ಕ್ಕೆ ಒಪ್ಪಿ ಘಟನೋತ್ತರ ಮಂಜೂರಾತಿ ನೀಡಲು ಮತ್ತು ಬಿಲ್ಲು ಪಾವತಿ ಮಾಡುವುದಾಗಿ ನಿರ್ಣಯಿಸಲಾಯಿತು.

4) ಉಳ್ಳಾಲ ಪುರಸಭಾ ವ್ಯಾಪ್ತಿಯ ಮೋಗವೀರಪಟ್ನ ಐಸ್‌ಪ್ಲಾಂಟ್ ಬಳಿ ತೆರೆದ ಬಾವಿ
ನಿರ್ಣಯ: ಈ ಬಗ್ಗೆ ಕರೆಯಲಾದ ಕೋಟೇಶನುಗಳಲಲಿ ಅತೀ ಕಡಿಮೆದರ ನಮೂದಿಸಿ ಶ್ರೀ ಕುಂಞಬಾವ ಮೇಲಂಗಡಿ ಇವರ ದರ ರೂ 4100–00ಕ್ಕೆ ಒಪ್ಪಿ ಘಟನೋತ್ತರ ಮಂಜೂರಾತಿ ನೀಡಲು ಮತ್ತು ಬಿಲ್ಲು ಪಾವತಿ ಮಾಡುವುದಾಗಿ ನಿರ್ಣಯಿಲಾಯಿತು.

ವಿಷಯ:449: ಉಳ್ಳಾಲ ಪುರಸಭಾ ವ್ಯಾಪ್ತಿಯ 27ನೇ ವಾರ್ಡಿನ ಸೇವಂತಿಗುಡ್ಡೆ ಪ್ರಕಾಶ್ ಕಂಪೌಂಡು ಟರ್ನ್ ಬಳಿಯಿಂದ ಸೇವಂತಿಗುಡ್ಡೆ ಅಂಗನವಾಡಿವರೆಗೆ 2 ಇಂಚಿನ ಕೊಳವೆ ಬದಲಾಯಿಸುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀ ದಿನಕರ ಉಳ್ಳಾಲ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 450: ಉಳ್ಳಾಲ ಪುರಸಭೆ ವ್ಯಾಪ್ತಿಯ 27ನೇ ವಾರ್ಡಿನ ಬಬ್ಬುಕಟ್ಟೆ ಮಾದರಿ ಹಿರಿಯಪ್ರಾಥಮಿಕ ಶಾಲೆಗೆ ಕಂಪ್ಯೂಟರ್ ಕೊಠಡಿ ರಚನೆ ಮಾಡುವಂತೆ ಸ್ಥಳೀಯ ಸದಸ್ಯರಾದ ಶ್ರೀ ದಿನಕರ ಉಳ್ಳಾಲ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಂಪ್ಯೂಟರ್ ಕೊಠಡಿ ರಚನೆ ಮಾಡುವುದಾಗಿ ನಿರ್ಣಯಿಸಲಾಯಿತು.

ವಿಷಯ: 451: ಉಳ್ಳಾಲ ಪುರಸಭೆ ವ್ಯಾಪ್ತಿಯ 3ನೇ ವಾರ್ಡು ಮೋಗವೀರ ಪಟ್ನದಲ್ಲಿ ಇರುವ ಕಿರು ಬೋರ್‌ವೆಲ್‌ನಲ್ಲಿ ಕೆಸರು ತುಂಬಿದ್ದು, ಇದರ ಬದಲಿಗೆ ಅದರ ಹತ್ತಿರ ಕಡಿಮೆ ಆಳದ ಕೊಳವೆಬಾವಿ ಕೊರೆಯುವ ಬಗ್ಗೆ ಪಂಪುಚಾಲಕರ ಮತ್ತು ಕಿರಿಯ ಅಭಿಯಂತರರ ವರದಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕೊಳವೆಬಾವಿ ಕೊರೆಯುವುದಾಗಿ ನಿರ್ಣಯಿಸಲಾಯಿತು.

ವಿಷಯ: 452: ಉಳ್ಳಾಲ ಪುರಸಭಾ ವ್ಯಾಪ್ತಿಯ 5ನೇ ವಾರ್ಡು ಕೆಳಗಿನಬೀದಿ ಟೈಲ್ಸ್ ಕಾರ್ಖಾನೆಬಳಿ ಚರಂಡಿಯ ಚಪ್ಪಡಿಕಲ್ಲು ತೆಗೆದು ಹೂಳೆತ್ತಿ ಮಣ್ಣನು ದೂರಕ್ಕೆ ಸಾಗಿಸುವ ಬಗ್ಗೆ ಸ್ಥಳೀಯ ಸದಸ್ಯರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 453:ಈ ಕೆಳಗಿನ ಸ್ಥಳಗಳಲ್ಲಿ ಹೈಮಾಸ್ಟ್ ದೀಪ ಅಳವಡಿಸುವಂತೆ ಸ್ಥಳೀಯ ಸದಸ್ಯರ ಮನವಿ ಕುರಿತು

1) ಅಲೇಕಲ ಜುಮ್ಮಾ ಮಸೀದಿ ಬಳಿ
2) ಅಲೇಕಲ ಮದನಿ ಕಾಲೇಜು ಜಂಕ್ಷನ್ ಬಳಿ

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ಅಳವಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 454: ಉಳ್ಳಾಲ ಪುರಸಭೆ ಕಚೇರಿಯ ಇಂಟರ್‌ಕಾಮ್ ದುರಸ್ತಿ ಪಡಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕೋಟೇಶನು ಕರೆದು ದುರಸ್ತಿಪಡಿಸಲು ನಿರ್ಣಯಿಸಲಾಯಿತು.

ವಿಷಯ:455: ಉಳ್ಳಾಲ ಪುರಸಭೆ ವ್ಯಾಪ್ತಿಯ 10ನೇ ವಾರ್ಡಿನ ಅಕ್ಕರಕೆರೆ ಪಟೇಲ್ ಕಂಪೌಂಡು ಬಳಿ ಹೊಸ ಕೊಳವೆಬಾವಿ ಕೊರೆಯುವಂತೆ ಸ್ಥಳೀಯ ಸದಸ್ಯರಾದ ಶ್ರೀಮತಿ ಜಮೀಲಾ ಹುಸೈನ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ. ಚರ್ಚಿಸಲಾಗಿ ಕೊಳವೆಬಾವಿ ಕೊರೆಯುವುದಾಗಿ ನಿರ್ಣಯಿಸಲಾಯಿತು.

ವಿಷಯ: 456: ಉಳ್ಳಾಲ ಪುರಸಭಾ ವ್ಯಾಪ್ತಿಯ ಸೇವಂತಿಗುಡ್ಡೆ, ಪದ್ಮಾವತಿ ಮನೆ ಬಳಿ, ಗಿರಿಜಕ್ಕರವರ ಮನೆ ಬಳಿ, ಮುಡಿಪೋಡಿ ಇಬ್ರಾಹಿಂ ಮನೆ ಬಳಿ, ತೋಡುಬದಿ ಸುಂದರವರ ಮನೆ ಬಳಿ ದಾರಿದೀಪದ ಲೈನು ವಿಸ್ತರಣೆ ಕಾಮಗಾರಿ 1) ಶ್ರೀ ಪ್ರವೀಣ, ಸುವರ್ಣಎಲೆಕ್ಟ್ರಿಕಲ್ಸ್, ಸುಂದರಿಬಾಗ್ ಇವರಿಗೆ ಕಾಮಗಾರಿ ಆದೇಶನೀಡಿ ಐದುತಿಂಗಳು ಕಳೆದರೂ ಕಾಮಗಾರಿ ನಿರ್ವಹಿಸಿರುವುದಿಲ್ಲ. ಈ ಬಗ್ಗೆ ಮರು ನೋಟೀಸು ನೀಡಲಾಗಿದೆ.ಆದರೂ ಗುತ್ತಿಗೆದಾರರು ಕಾಮಗಾರಿ ನಿರ್ವಹಿಸಿರುವುದಿಲ್ಲ. ಹಾಗೂ ನೋಟೀಸಿಗೆ ಉತ್ತರ ನೀಡಿರುವುದಿಲ್ಲ. ಈ ಬಗಗೆ ಕ್ರಮಕೈಗೊಳ್ಳುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಶ್ರೀ ಪ್ರವೀಣ್, ಸುವರ್ಣ ಇಲೆಕ್ಟ್ರಿಕಲ್ಸ್ ಇವರಿಗೆ ನೀಡಿದ ಕಾಮಗಾರಿ ಆದೇಶ ರದ್ದು ಪಡಿಸಿ ಮರು ಟೆಂಡರು ಕರೆದು ಕಾಮಗಾರಿ ನಿರ್ವಹಿಸಲು ನಿರ್ಣಯಿಸಲಾಯಿತು.

ವಿಷಯ:457: ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ 9ನೇ ವಾರ್ಡು ಹಳೇಕೋಟೆ ಗುಡ್ಡೆಗೆ ನೀರು ಸರಬರಾಜು ಮಾಡಲು ಮಿಲ್ಲತ್‌ನಗರ ಸಂಕದಿಂದ ಯು.ಎನ್.ಬಶೀರ್ ಮನೆತನಕ 2 ಇಂಚು ಹೆಚ್ಚುವರಿ ಕೊಳವೆಸಾಲು ಅಳವಡಿಸುವುದು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಬಂದ ಟೆಂಡರುಗಳನ್ನು ಪರಿಶೀಲಿಸಲಾಗಿ ಅಂದಾಜುಪಟ್ಟಿ ದರಕ್ಕಿಂತ ಶೇ 7.99% ಅಧಿಕ ದರ ಸೂಚಿಸಿದ ಶ್ರೀ ಬಿ.ಎಸ್. ಶರೀಫ್ ಇವರ ದರವನ್ನು ಮಂಜೂರು ಮಾಡಲಾಯಿತು.

ಸಹಿ. ಅಧ್ಯಕ್ಷರು ಮತ್ತು ಸದಸ್ಯರು

(ಯಥಾಪ್ರತಿ)

ಮುಖ್ಯಾಧಿಕಾರಿ
ಉಳ್ಳಾಲ ಪುರಸಭೆ,ದ.ಕ